ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	454
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸಬೇಕಾದ ದಿನಾಂಕ	:	30-03-2022
ಉತ್ತರಿಸುವ ಸಚಿವರು	:	ತೋಟಗಾರಿಕೆ ಹಾಗೂ ಯೋಜನೆ,ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	2013 ರಲ್ಲಿ ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕು ಘೋಷಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಕಿತ್ತೂರು ತಾಲ್ಲೂಕು ಮಟ್ಟದಲ್ಲಿ ಹುದ್ದೆಗಳ ಸಹಿತ ಸಹಾಯಕ ನಿರ್ದೇಶಕರು ತೋಟಗಾರಿಕೆ ಇಲಾಖೆ ಕಛೇರಿ ಆರಂಭಿಸುವ ಪ್ರಸ್ತಾವನೆ ಸರ್ಕಾರದ ಯಾವ ಹಂತದಲ್ಲಿದೆ;	ಕಿತ್ತೂರು ತಾಲ್ಲೂಕು ಮಟ್ಟದಲ್ಲಿ ವಿವಿಧ 07 ಹುದ್ದೆಗಳ ಸಹಿತ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ತೋಟಗಾರಿಕೆ ಇಲಾಖೆ ಕಛೇರಿ ಆರಂಬಿಸುವ ಪ್ರಸ್ತಾವನೆಯ ಬಗ್ಗೆ ಆರ್ಥಿಕ ಇಲಾಖೆಯು ಮುಂದಿನ 4 ವರ್ಷಗಳ ಅವಧಿಯವರೆಗೆ ಹೊಸ ತಾಲ್ಲೂಕು ರಚನೆಯಾಗುವ ಪೂರ್ವ ಇದ್ದಂತಹ ಹಳೆಯ ತಾಲ್ಲೂಕುಗಳಲ್ಲಿ, ಹಾಲಿ ಇರುವ ಅಧಿಕಾರಿ ಮತ್ತು ಸಿಬ್ಬಂಧಿಗಳಿಂದಲೇ ಹೊಸ ತಾಲೂಕಿಗೆ ಹುದ್ದೆ ಸೃಜಿಸುವವರೆಗೂ ಕೆಲಸ ನಿರ್ವಹಿಸಲು ದಿನಾಂಕ: 26.06.2019 ರಲ್ಲಿ ಸೂಚಿಸಿರುತ್ತದೆ. ಈ ಅನ್ವಯ ಪ್ರಸ್ತುತ ಹಾಲಿ ಇರುವ ಅಧಿಕಾರಿ/ಸಿಬ್ಬಂದಿ ಗಳಿಂದ ಕೆಲಸ ನಿರ್ವಹಿಸಲಾಗುತ್ತಿದೆ.

No.HORTI 244 HGM 2022

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ,

ಕಾರ್ಯಕ್ರಮ ಸಂಯೋಜನೆ ಮತ್ತು

ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	457
ಮಾನ್ಯ ಸದಸ್ಯರ ಹೆಸರು	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸಬೇಕಾದ ದಿನಾಂಕ	30.03.2022
ಉತ್ತರಿಸುವ ಸಚಿವರು	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು.

ಪ್ರ ಸಂ.	ಪ್ರಶ್ನೆ	ಉತ್ತರ
ಅ)	2013ರಲ್ಲಿ ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕು ಘೋಷಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು ಬಂದಿರುತ್ತದೆ.
ಆ)	ಕಿತ್ತೂರು ತಾಲ್ಲೂಕು ಮಟ್ಟದಲ್ಲಿ ಹುದ್ದೆಗಳ ಸಹಿತ ವಿಸ್ತರಣಾಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಛೇರಿ ಆರಂಭಿಸುವ ಪ್ರಸ್ತಾವನೆ ಸರ್ಕಾರದ ಯಾವ ಹಂತದಲ್ಲಿದೆ;	ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರೀಶಿಲನೆಯಲ್ಲಿರುತ್ತದೆ.
ಇ)	ಯಾವ ಕಾಲಮಿತಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಾಲ್ಲೂಕು ವಿಸ್ತರಣಾಧಿಕಾರಿಗಳ ಕಛೇರಿ ಆರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದು.	

ಸಂಖ್ಯೆ:ಹಿಂವಕ 83 ಬಿಇಟಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ
ಕಲ್ಯಾಣ ಇಲಾಖಾ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 461

ಸದಸ್ಯರ ಹೆಸರು : ಶ್ರೀ ರಾಮಪ್ಪ ಎಸ್.

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 30.03.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಸಾರಿಗೆ ಇಲಾಖೆಯ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲಾಗಿದೆಯೇ ;	ಸಾರಿಗೆ ಇಲಾಖೆಯ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲಾಗಿರುವುದಿಲ್ಲ. ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950ರಡಿ ಅಸ್ತಿತ್ವಕ್ಕೆ ಬಂದಿರುವ ಸ್ರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಿದೆ. ಆದ್ದರಿಂದ, ರಾಜ್ಯ ರ್ಕಾರಿ ನೌಕರರ ವೇತನ ಶ್ರೇಣಿ ಮತ್ತು ವೇತನವನ್ನು ರಸ್ತೆ ಸಾರಿಗೆ ನಿಗಮಗಳ ನೌಕರರ ವೇತನ ಶ್ರೇಣಿ ಮತ್ತು
ಆ.	ಪರಿಗಣಿಸಿದ್ದಲ್ಲಿ, ಸಾರಿಗೆ ಇಲಾಖೆಯ ಸಿಬ್ಬಂದಿಗಳಿಗೆ, ಸರ್ಕಾರಿ ನೌಕರರಿಗೆ / ಇತರೆ ನಿಗಮ ಮಂಡಳಿಗಳ ನೌಕರರಿಗೆ ನೀಡುವ ಇತರೆ ಸೌಲಭ್ಯಗಳನ್ನು ನೀಡಲಾಗುತ್ತಿದೆಯೇ;	
ಇ.	ಇಲ್ಲದಿದ್ದಲ್ಲಿ, ಸಾರಿಗೆ ಇಲಾಖೆಯ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ	

	ನೀಡುವುದು)	ವೇತನಕ್ಕೆ ಹೋಲಿಸಲು ಬರುವುದಿಲ್ಲ. ಉಳಿದಂತೆ, ನಿಗಮಗಳ ನೌಕರರು ರಾಜ್ಯ ರ್ಕಾರದ ಮಾದರಿಯಲ್ಲಿಯೇ ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ರಜಾ ಸೌಲಭ್ಯಗಳು, ವೈದ್ಯಕೀಯ ಮರುಪಾವತಿ ಸೌಲಭ್ಯ ಇತ್ಯಾದಿ ಸೌಲಭ್ಯಗಳನ್ನು ಪಡೆಯುವರು. ಆದರೆ, ರಸ್ತೆ ಸಾರಿಗೆ ನಿಗಮಗಳ ನೌಕರರು ರಾಜ್ಯ ಸರ್ಕಾರದ ಮಾದರಿಯಲ್ಲಿಯೇ ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ರಜಾ ಸೌಲಭ್ಯಗಳು, ವೈದ್ಯಕೀಯ ಮರುಪಾವತಿ ಸೌಲಭ್ಯ ಇತ್ಯಾದಿ ಸೌಲಭ್ಯಗಳನ್ನು ಪಡೆಯುತ್ತಿದ್ದು, ವಿವರಗಳನ್ನು **'ಅನುಬಂಧ'**ದಲ್ಲಿ ನೀಡಲಾಗಿದೆ.

ಸಂಖ್ಯೆ: ಟಿಡಿ 145 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಅನುಬಂಧ-ಅ

ರಾಜ್ಯ ಸರ್ಕಾರ ಮತ್ತು ಕರಾರಸಾನಿಗಮದಲ್ಲಿ ಇರುವ ಸಾಮಾನ್ಯ ಸೌಲಭ್ಯಗಳು		
1	ಮನೆ ಬಾಡಿಗೆ ಭತ್ಯೆ	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.
2	ತುಟ್ಟಿ ಭತ್ಯೆ	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.
3	ನಗರ ಪರಿಹಾರ ಭತ್ಯೆ	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.
4	ರಜಾ ಸೌಲಭ್ಯ : ಗಳಿಕೆ ರಜೆ, ಪರಿವರ್ತಿತ ರಜೆ, ಸಾಂರ್ದಭಿಕ ರಜೆ ಹೆರಿಗೆ ರಜೆ, ಗರ್ಭಪಾತ ರಜೆ, ಶಿಶುಪಾಲನಾ ರಜೆ.	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.
5	ಗಳಿಕೆ ರಜೆ ನಗದೀಕರಣ	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.
6	ಪ್ರಭಾರ ಭತ್ಯೆ : ಪ್ರಭಾರ ಭತ್ಯೆಯ ದರವು ಸಿಬ್ಬಂದಿಯು ಅಧಿಕ ಪ್ರಭಾರ ಹೊಂದಿದ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಮೂಲವೇತನದ ಶೇಕಡ 7.5 ರಷ್ಟಿದೆ.	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.
7	ಪ್ರಯಾಣ ಭತ್ಯೆ ಮತ್ತು ದಿನಭತ್ಯೆ : ಸರ್ಕಾರಿ ಸಿಬ್ಬಂದಿಯು ತಮ್ಮ ಅಧಿಕೃತ ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ ಕೈಗೊಳ್ಳುವ ಪ್ರಯಾಣ, ವಾಸ್ತವ್ಯ ಮತ್ತು ಆಹಾರ ಇತ್ಯಾದಿಗಳ ವೆಚ್ಚವನ್ನು ಭರಿಸಲು ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ನೀಡಲಾಗುತ್ತದೆ.	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ
8	ವಾಹನ ಭತ್ಯೆ (ಮೋಟಾರು ಕಾರು, ಮೋಟಾರು ಸೈಕಲ್, ಸ್ಕೂಟರ್, ಮೊಪೆಡ್, ಬೈಸಿಕಲ್)	ಅಧಿಕಾರಿಗಳಿಗೆ ಕೆಳಕಂಡಂತೆ ಮಾಸಿಕ ವಾಹನ ಭತ್ಯೆ ನೀಡಲಾಗುತ್ತಿದೆ: ದರ್ಜೆ-2 = ರೂ.3000/- ದರ್ಜೆ-1 ಕಿರಿಯ = ರೂ.5000/- ದರ್ಜೆ-1 ಹಿರಿಯ ಮತ್ತು ಇಲಾಖಾ ಮುಖ್ಯಸ್ಥರಿಗೆ ನಿಗಮದ ವತಿಯಿಂದಲೇ ವಾಹನದ ವ್ಯವಸ್ಥೆ ಇರುತ್ತದೆ. ಸಿಬ್ಬಂದಿಗಳಿಗೆ ಕರ್ತವ್ಯಕ್ಕೆ ಬಂದು ಹೋಗಲು ಉಚಿತ ಬಸ್ ಪಾಸ್ ಸೌಲಭ್ಯವಿರುವುದರಿಂದ ವಾಹನ ಭತ್ಯೆ ಸೌಲಭ್ಯ ಇರುವುದಿಲ್ಲ.
9	ಸಮವಸ್ತ್ರ ಭತ್ಯೆ : ಹುದ್ದೆವಾರು ನೀಡಲಾಗುತ್ತಿದೆ.	ಸಮವಸ್ತ್ರಕ್ಕೆ ಅರ್ಹರಿರುವ ಎಲ್ಲಾ ವರ್ಗದ ನೌಕರರಿಗೆ ವಾರ್ಷಿಕ ಎರಡು ಜೊತೆ ಸಮವಸ್ತ್ರವನ್ನು ನಿಗಮದ ವತಿಯಿಂದ ಒದಗಿಸಲಾಗುತ್ತಿದೆ. ಜೊತೆಗೆ ಹೊಲಿಗೆ ಭತ್ಯೆ ಒಂದು ಜೊತೆಗೆ ರೂ.175/- ಮತ್ತು ಮಾಸಿಕ ವಾಷಿಂಗ್ ಭತ್ಯೆ ರೂ.35/- ಗಳನ್ನು ನೀಡಲಾಗುತ್ತಿದೆ.

10	ಬೆಚ್ಚನೆಯ ಉಡುಪು ಭತ್ಯೆ (2 ವರ್ಷಗಳಿಗೊಮ್ಮೆ) : ಹುದ್ದೆವಾರು ನೀಡಲಾಗುತ್ತಿದೆ.	ಅಧಿಕಾರಿಗಳನ್ನು ಹೊರತುಪಡಿಸಿ ಇತರೇ ಎಲ್ಲಾ ವರ್ಗದ ನೌಕರರಿಗೆ ನಾಲ್ಕು ವರ್ಷಗಳಿಗೊಮ್ಮೆ ರೂ.600/- ಗಳನ್ನು ಜರ್ಸಿ ರೇನ್‌ಕೋಟ್ ಖರೀದಿ ಬಾಬ್ತು ನೀಡಲಾಗುತ್ತಿದೆ.
11	ವಿಶೇಷ ಭತ್ಯೆ: ಹಲವಾರು ಇಲಾಖೆಗಳ ನಿರ್ದಿಷ್ಟ ಹುದ್ದೆಗಳಿಗೆ ಅವರು ನಿರ್ವಹಿಸುವ ಕಾರ್ಯ ನಿರ್ವಹಣೆಯ ಸ್ವರೂಪದ ಆಧಾರದ ಮೇಲೆ ವಿಶೇಷ ಭತ್ಯೆಯನ್ನು ನೀಡಲಾಗುತ್ತದೆ.	ಹುದ್ದೆವಾರು ನಿರ್ವಹಿಸುವ ಕರ್ತವ್ಯ ನಿರ್ವಹಣೆಯ ಸ್ವರೂಪದ ಆಧಾರದ ಮೇಲೆ ಬಾಟಾ ಮತ್ತು ಭತ್ಯೆಗಳನ್ನು ನೀಡಲಾಗುತ್ತಿದೆ.
12	ಹಬ್ಬದ ಮುಂಗಡ : ವಾರ್ಷಿಕ ರೂ.25,000/-	ವಾರ್ಷಿಕ: ರೂ.5,000/-ನೀಡಲಾಗುತ್ತಿದೆ.
13	ವಿಶೇಷ ಚೇತನ ಸಿಬ್ಬಂದಿಗೆ ಸೌಲಭ್ಯಗಳು: 1. ವಾಹನ ಭತ್ಯೆ: ವಿಶೇಷ ಚೇತನ ಸಿಬ್ಬಂದಿಯು ಕಛೇರಿಗೆ ಹೋಗಿ ಬರುವ ವೆಚ್ಚವನ್ನು ಭರಿಸಲು ಮೂಲವೇತನದ ಶೇಕಡ 6 ರಷ್ಟು ವಾಹನ ಭತ್ಯೆಯನ್ನು ನೀಡಲಾಗುತ್ತಿದೆ. 2. ವಿಶೇಷಚೇತನ ಮಕ್ಕಳ ಶೈಕ್ಷಣಿಕ ಭತ್ಯೆ: ಪ್ರಸ್ತುತ ವಿಶೇಷ ಚೇತನ ಮಕ್ಕಳಿಗೆ (ಇಬ್ಬರು ಮಕ್ಕಳಿಗೆ ಮಾತ್ರ) ಮಾಸಿಕ ರೂ.1000/-	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.
14	ಶಿಶುಪಾಲನಾ ರಜೆ: ಬುದ್ಧಿಮಾಂದ್ಯ/ಅಂಗವಿಕಲ ಮಕ್ಕಳನ್ನು ನೋಡಿಕೊಳ್ಳಲು ಮಹಿಳಾ ನೌಕರರಿಗೆ ಒಟ್ಟು 730 ದಿವಸಗಳ "ಶಿಶು ಪಾಲನಾ ರಜೆ"ಯನ್ನು ವೇತನಸಹಿತವಾಗಿ ಮಂಜೂರು ಮಾಡಲಾಗುತ್ತಿದೆ.	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.
15	ವರ್ಗಾವಣೆ ಅನುದಾನದ ದರಗಳು .	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.
16	ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯ: ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗೀ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಲ್ಲಿ ಸಿಜಿಹೆಚ್‌ಎಸ್ 2014 ದರದಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯ.	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.
17	ಕನ್ನಡಕ ಖರೀದಿ ಮರುಪಾವತಿಯನ್ನು ರೂ.1000/- ಗಳನ್ನು ದರ್ಜೆ 3 ಮತ್ತು ದರ್ಜೆ 4 ನೌಕರರು ಮತ್ತು ಕುಟುಂಬದವರು ಸೇರಿದಂತೆ ಸೇವಾ ಅವಧಿಯಲ್ಲಿ ಮೂರು ಬಾರಿ ನೀಡಲು ಅವಕಾಶವಿದೆ.	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.

18	ಸರ್ಕಾರಿ ನೌಕರರು ಮರಣ ಹೊಂದಿದ ಸಂದರ್ಭದಲ್ಲಿ ಶವ ಸಂಸ್ಕಾರ ಮತ್ತು ಕಾರ್ಯಗಳನ್ನು ಮಾಡಲು ಅವರ ಅವಲಂಬಿತರಿಗೆ ರೂ.25,000/-ಗಳನ್ನು ಎಕ್ಸ್‌ಗ್ರೇಷಿಯಾ ರೂಪದಲ್ಲಿ ನೀಡಲಾಗುತ್ತದೆ.	ನಿಗಮದಲ್ಲಿ ರೂ.10,000/- ಗಳನ್ನು ಎಕ್ಸ್‌ಗ್ರೇಷಿಯಾ ರೂಪದಲ್ಲಿ ನೀಡಲಾಗುತ್ತದೆ.
19	ನೌಕರರು ಸೇವೆಯಲ್ಲಿರುವಾಗ ನಿಧನರಾದ ಪಕ್ಷದಲ್ಲಿ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಒರ್ವ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕ ನೀಡಲಾಗುವುದು.	ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ
20	ಎಲ್‌ಟಿಸಿ : ಸೇವಾ ಅವಧಿಯಲ್ಲಿ ಎರಡು ಬಾರಿ ಕುಟುಂಬ ಸಮೇತ ಒಂದು ಸ್ಥಳಕ್ಕೆ ಹೋಗಿ ಬರಲು ನೀಡಲಾಗುತ್ತದೆ. (ಹುದ್ದೆಗನುಗುಣವಾಗಿ ಪ್ರಯಾಣ ದರವನ್ನು ಮರುಪಾವತಿ ಮಾಡಲಾಗುವುದು) ಹೆಚ್‌ಟಿಸಿ: ಈ ಸೌಲಭ್ಯವನ್ನು ಕುಟುಂಬ ಸಮೇತ ಸ್ವಂತ ಊರಿಗೆ ಹೋಗಿ ಬರಲು ಎರಡು ವರ್ಷಕ್ಕೊಮ್ಮೆ ನೀಡಲಾಗುತ್ತಿದೆ.	ನಾಲ್ಕು ವರ್ಷಕ್ಕೊಮ್ಮೆ ಕುಟುಂಬ ಸಮೇತ ಗರಿಷ್ಠ 4000 ಕಿಮೀ ವರೆಗೆ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. (ಹುದ್ದೆಗನುಗುಣವಾಗಿ ಪ್ರಯಾಣ ದರವನ್ನು ಮರುಪಾವತಿ ಮಾಡಲಾಗುವುದು) ನಿಗಮದ ನೌಕರರು ವಾರ್ಷಿಕ ಒಂದು ಸಾರಿ ಮಾತ್ರ (ಒಂದು ತಿಂಗಳ ಅವಧಿಯಲ್ಲಿ ಚಾಲ್ತಿಯಲ್ಲಿರುವಂತೆ) ಕುಟುಂಬ ಸಮೇತ ಪ್ರಯಾಣಿಸಲು ಉಚಿತ ಪಾಸ್ ನೀಡಲಾಗುವುದು (ಸಾಮಾನ್ಯ /ವೇತದೂತ/ ಕರ್ನಾಟಕ ಸಾರಿಗೆಗಳಲ್ಲಿ ಮಾತ್ರ). ಅಧಿಕಾರಿ ಮತ್ತು ಅವರ ಕುಟುಂಬದವರಿಗೆ ರಾಜಹಂಸ ಸಾರಿಗೆಗಳಲ್ಲಿ ಪ್ರಯಾಣಿಸಲು ಅನುಮತಿಸಲಾಗಿದೆ.
21	ಉಪದನ : ಸರ್ಕಾರದಲ್ಲಿ ಉಪದನ ಕಾಯಿದೆಯನ್ವಯ ಗರಿಷ್ಠ ರೂ:20.00ಲಕ್ಷಗಳ ಉಪದನವನ್ನು ನೀಡಲಾಗುತ್ತಿದೆ.	ನಿಗಮದ ಉಪದನ ನಿಯಮಾವಳಿ ಅಥವಾ ಉಪದನ ಕಾಯ್ದೆ (ಕೈಗಾರಿಕಾ ಒಪ್ಪಂದದ ಕ್ಲಾಸ್ ನಂತೆ) ಇವೆರಡರ ಪೈಕಿ ನೌಕರರಿಗೆ ಯಾವುದು ಅನುಕೂಲವಾಗುತ್ತದೆಯೋ ಆ ಮೊತ್ತವನ್ನು ಯಾವುದೇ ಮಿತಿಯ ನಿರ್ಬಂಧವಿಲ್ಲದೇ ನೀಡಲಾಗುತ್ತಿದೆ. 2002ರ ನಂತರ ಸೇವೆಗೆ ಸೇರಿದ ನೌಕರರು ಉಪಧನ ಕಾಯಿದೆಯನ್ವಯ ಮಾತ್ರ ಉಪಧನ ಪಡೆಯಲು ಅರ್ಹರು.

ಮುಖ್ಯ ಕಾರ್ಮಿಕ ಕಲ್ಯಾಣಾಧಿಕಾರಿ
ಕರಾರಸಾ ಸಂಸ್ಥೆ, ಕೇಂದ್ರ ಕಛೇರಿ
ಬೆಂಗಳೂರು – 560 027

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 463
ಸದಸ್ಯರ ಹೆಸರು : ಶ್ರೀ ರಾಮಪ್ಪ ಎಸ್
ಉತ್ತರಿಸುವ ದಿನಾಂಕ : 30-03-2022
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
ಅ)	ಆದೇಶ ಸಂಖ್ಯೆ: ಸಕಇ-361: ಎಸ್‌ಎಲ್‌ಪಿ-2021, ಬೆಂಗಳೂರು ದಿನಾಂಕ:17-09-2021ರ ಆದೇಶದನ್ವಯ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿಯಲ್ಲಿ ಹರಿಹರ ಕ್ಷೇತ್ರಕ್ಕೆ ಒಟ್ಟು ರೂ.2.50 ಕೋಟಿ ಅನುದಾನ ಮಂಜೂರಾಗಿದ್ದು, ಸದರಿ ಆದೇಶವು ಇದುವರೆಗೂ ಜಾರಿಯಾಗದೇ ಅನುದಾನ ಬಿಡುಗಡೆಯಾಗದೇ ಇರುವುದಕ್ಕೆ ಕಾರಣವೇನು;	2021-22ನೇ ಸಾಲಿನ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯಡಿ ಕ್ರಿಯಾ ಯೋಜನೆಯಲ್ಲಿ ಲೋಕೋಪಯೋಗಿ ಇಲಾಖೆಗೆ ಜಿಲ್ಲಾ ಮತ್ತು ಇತರೆ ರಸ್ತೆಗಳು 5054-04-337-0-01 ರಡಿ ಎಸ್.ಸಿ.ಎಸ್.ಪಿ ರಡಿ ರೂ.680.00 ಕೋಟಿಗಳನ್ನು ಮತ್ತು ಟಿ.ಎಸ್.ಪಿ ರಡಿ ರೂ.395.00 ಕೋಟಿಗಳನ್ನು ಇರಿಸಲಾಗಿದ್ದು, ಸದರಿ ಅನುದಾನದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲು ರಾಜ್ಯ ಪ.ಜಾತಿ/ಪ.ಪಂಗಡ ಅಭಿವೃದ್ಧಿ ಪರಿಷತ್ತಿನ ನಿರ್ಣಯಿಸಲಾಗಿರುತ್ತದೆ. ರಾಜ್ಯ ಮಳಿಗೆಗಳು ಮತ್ತು ಕ್ರೈಸ್ ಶಾಲೆಗಳ ಕಟ್ಟಡಗಳನ್ನು ನಿರ್ಮಿಸುವುದು ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಪ.ಜಾತಿ/ಪ.ಪಂಗಡದ ಜನಸಂಖ್ಯೆ ಆಧಾರದ ಮೇಲೆ ಅನುದಾನವನ್ನು ಹಂಚಿಕೆ ಮಾಡಿ, ಮೂಲಭೂತ ಸೌಕರ್ಯಗಳ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದು. ಒಟ್ಟು ಅನುದಾನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಶೇ.20 ರಷ್ಟು ಲೋಕೋಪಯೋಗಿ ಇಲಾಖೆಯಿಂದ ಶೇ.40 ರಷ್ಟು ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಶೇ.40 ರಷ್ಟು ಅನುದಾನ ಹಂಚಿಕೆ ಮಾಡುವುದು. ಕ್ರಿಯಾ ಯೋಜನೆಯ ಅನುಮೋದನೆಯಂತೆ ಸಮಾಜ ಕಲ್ಯಾಣ ಇಲಾಖೆಯಿಂದ ರಾಜ್ಯ ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಕಾಲೋನಿಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆಗೊಳಿಸಲು ಆದೇಶ ಹೊರಡಿಸಿ ಲೋಕೋಪಯೋಗಿ ಇಲಾಖೆಗೆ ತಿಳಿಸಲಾಗಿತ್ತು. ಆದರೆ, ಲೋಕೋಪಯೋಗಿ ಇಲಾಖೆಯು ಸಮಾಜ ಕಲ್ಯಾಣ ಇಲಾಖೆಯ ಆದೇಶವನ್ನು ಅನುಷ್ಠಾನ ಮಾಡದೇ, ಈ ಅನುದಾನದ ಹಂಚಿಕೆಯ ಕುರಿತು ಲೋಕೋಪಯೋಗಿ ಇಲಾಖೆಯು
ಆ)	ಮಂಜೂರಾದ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು)	

		ಅವರ ಕಡತದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ಪಡೆದು 2021-22ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ ಲೆಕ್ಕಶೀರ್ಷಿಕೆ 5054-04-337-0-01 ಇದರಡಿಯ ಉದ್ದೇಶಿತ ಲೆಕ್ಕಶೀರ್ಷಿಕೆ-422 ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ 423-ಗಿರಿಜನ ಉಪಯೋಜನೆ ಇವುಗಳಡಿ ಒದಗಿಸಿರುವ ಅನುದಾನವನ್ನು ಲೋಕೋಪಯೋಗಿ ಇಲಾಖೆಯಿಂದಲೇ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ವಾಸಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಗಳ ಜನಸಂಖ್ಯೆಯನ್ನು ಆಧರಿಸಿ/ಮಾನ್ಯ ಲೋಕೋಪಯೋಗಿ ಸಚಿವರು ವಿವೇಚನೆ ಆಧಾರದ ಮೇಲೆ ಹಂಚಿಕೆ ಮಾಡಲು ಕ್ರಮವಹಿಸಿರುತ್ತಾರೆ.

ಸಕಇ 300 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು